


ಮಹಿಳಾ ಮಾರುಕಟ್ಟೆ
ಆಯೋಜಿಸಿದ ಗ್ರಾಹಕ ಮೇಳ

ಇದೇ ಸಮಯ, ಎಂದರೆ ಕಳೆದ ವರ್ಷ ಮಾರ್ಚ್ ತಿಂಗಳಲ್ಲಿ ಕೊರೊನಾ ಹಾವಳಿ ಶುರುವಾಯ್ತು. ಅನೇಕ ಮಹಿಳೆಯರು ಕೆಲಸ ಕಳೆದುಕೊಂಡ್ರು. ಖಾಸಗಿ ಶಾಲಾ ಕಾಲೇಜು ಟೀಚರ್ಸ್‌ಗೆ ಉದ್ಯೋಗ ಇಲ್ಲದಾಯಿತು. ಎಲ್ಲರೂ ಹಣಕಾಸು ಬೆಂಬಲವಿಲ್ಲದೆ ಕಂಗೆಟ್ಟರು. ಕೆಲಸಗಳೆಲ್ಲ ನಿಂತೇ ಹೋಯ್ತು. ಜೊತೆಗೆ ಹೆಂಗಸರೆಲ್ಲ 'ಕೆಲಸ ಹೋಗಿ ಪರಿಸ್ಥಿತಿ ಕೈ ಮೀರುತ್ತಾ ಇದೆ' ಎಂದು ಕೈಚೆಲ್ಲಿ ಕೂತರು. ಆಗ ಇಲ್ಲಿ ಏನಾದ್ರೂ ಮಾಡ್ಬೇಕು ಅಂತ ಫೇಸ್‌ಬುಕ್‌ನಲ್ಲಿ 'ಮಹಿಳಾ ಮಾರುಕಟ್ಟೆ' ಅಂತ (ಮೇ 25 2020) ಶುರು ಮಾಡ್ದೆ. ಫೇಸ್‌ಬುಕ್ ಗ್ರೂಪ್ ಮಾಡಿ 'ನಿಮ್ಮ ಮನೆಯಲ್ಲಿ ಏನೇ ತಯಾರಿಸಿದರೂ ಇಲ್ಲಿ ಪೋಸ್ಟ್ ಹಾಕಬಹುದು. ಸೇಲ್ ಮಾಡಬಹುದು' ಎಂದೆ.

ಮಹಿಳೆಯರು ಮನೆಯಲ್ಲಿ ತಯಾರಿಸಿದ ಚಟ್ನಿಪುಡಿ, ಮಸಾಲೆ ಪುಡಿ, ಹಪ್ಪಳ ಸಂಡಿಗೆ, ಚಿಪ್ಸ್, ಸಿಹಿತಿನಿಸು, ಗೃಹಾಲಂಕಾರ, ಮನೆಯಲ್ಲೇ ಸಲ್ವಾರ್ ಹೊಲಿಯುವವರು... ಹೀಗೆ ಹುಬ್ಬಳ್ಳಿ, ಸಾಗರ, ಶಿವಮೊಗ್ಗ, ಶಿರಸಿ ಎಲ್ಲ ಕಡೆಗಳಿಂದ ಎಲ್ಲ ವಯೋಮಾನದವರು ಪೋಸ್ಟ್ ಹಾಕೋಕೆ ಶುರು ಮಾಡಿದ್ರು. ಸಾವಿರಾರು ಪೋಸ್ಟ್ ಬರೋದಕ್ಕೆ ಶುರು ಆಯ್ತು. ಹೀಗೆ ಬರಬರುತ್ತಾ 15 ಸಾವಿರ ಸದಸ್ಯೆಯರಾದ್ರು. ಈ ಮಧ್ಯೆ ಗಂಡಸರು ಮಹಿಳೆಯರ ಹೆಸರಿನಲ್ಲಿ ಅಕೌಂಟ್ ಕ್ರಿಯೇಟ್ ಮಾಡೋದು, ಮಿಸ್‌ಯೂಸ್ ಮಾಡೋದು ಶುರು ಆಯ್ತು. ಇದಕ್ಕೆ ಕಡಿವಾಣ ಹಾಕುವ ಸಲುವಾಗಿ ಗೆಳತಿ ಶೋಭಾ ರಾವ್ ಅವರನ್ನು ಅಡ್ಮಿನ್ ಆಗಿ ಸೇರಿಸಿಕೊಂಡು ವ್ಯವಸ್ಥಿತವಾಗಿ ನಡೆಯುವಂತೆ ಮಾಡಿದೆವು. ಉತ್ಪನ್ನಗಳನ್ನು ಮಾರಾಟ ಮಾಡುವವರು 100 ರೂಪಾಯಿ ಕೊಟ್ಟು ಐಡಿ ನಂಬರ್ ತೆಗೆದುಕೊಳ್ಳಬೇಕು. ವ್ಯಾಪಾರ ಚೆನ್ನಾಗಿ ಆಗುವವರೆಗೆ ಮುಂದುವರಿಯಲು ಅವಕಾಶ ಕೊಟ್ಟೆವು. ಹೀಗೆ ಮಹಿಳಾ ಮಾರುಕಟ್ಟೆಯ ಯಶಸ್ಸಿನ ಗ್ರಾಫ್ ಏರುತ್ತಲೇ ಹೋಯ್ತು. ಮಹಿಳೆಯರು ವಿವಿಧ ಉತ್ಪನ್ನಗಳ ವಹಿವಾಟು ಆನ್‌ಲೈನ್‌ನಲ್ಲೇ ನಡೆಸುತ್ತಾರೆ. ಕೊರಿಯರ್‌ನವರಿಗೂ ಕೈತುಂಬ ಉದ್ಯೋಗ ದೊರೆತಿದೆ.

ಈ ಮಧ್ಯೆ 'ಮಹಿಳಾ ಮಾರುಕಟ್ಟೆ' ಬೆಂಗಳೂರಿನ ಗಾಂಧಿ ಬಜಾರ್‌ನಲ್ಲಿ ಕಳೆದ ಮಹಿಳಾ ದಿನಾಚರಣೆಯಂದು ಗ್ರಾಹಕ ಮೇಳವನ್ನೂ ಏರ್ಪಡಿಸಿತ್ತು. ಸುಮಾರು 40 ಸ್ಟಾಲ್‌ಗಳಲ್ಲಿ ಮಹಿಳೆಯರು ತಮ್ಮ ಉತ್ಪನ್ನಗಳನ್ನು ಪ್ರದರ್ಶನ, ಮಾರಾಟ ಮಾಡುವ ಮೂಲಕ ಒಂದೇ ಮನೆಯ ಸದಸ್ಯರಂತೆ ವ್ಯಾಪಾರ ನಡೆಸಿದರು. ಕೆಲಸವಿಲ್ಲದೆ ಪೇಚಾಟ ನಡೆಸಿ ಧೃತಿಗೆಟ್ಟಿದ್ದ ಮಹಿಳೆಯರ ಧೃತಿಗೆಡದಂತೆ ಮಹಿಳಾ ಮಾರುಕಟ್ಟೆ ನೋಡಿಕೊಂಡಿದೆ. ಮಾರಾಟಗಾರರ–ಗ್ರಾಹಕರ ಮಧ್ಯೆ ಉತ್ತಮ ಸಂಬಂಧ ಏರ್ಪಟ್ಟಿದೆ. ಹೀಗಾಗಿ ಈ ಗುಂಪಿಗೆ 'ಧೃತಿ'ಎಂಬ ಹೆಸರಿಟ್ಟದ್ದು ಸಾರ್ಥಕವಾಯ್ತು. ಈಗ ಮಹಿಳೆಯರಲ್ಲಿ ಬದುಕುವ ಆತ್ಮವಿಶ್ವಾಸ ತುಂಬಿದೆ. ಹೇಗಾದರೂ ಬದುಕಿ ಬಾಳಬಹುದು ಎಂಬ ಧೈರ್ಯ ಬಂದಿದೆ. ಗುಂಪಿನ ಸದಸ್ಯೆಯರೆಲ್ಲ ಆತ್ಮೀಯ ಗೆಳತಿಯರು, ಬಂಧುಬಾಂಧವರಂತಾಗಿದ್ದಾರೆ. ಕಷ್ಟಸುಖ ಹೇಳಿಕೊಂಡು ಕೈತುಂಬ ಗಳಿಸಿಕೊಂಡು ನೆಮ್ಮದಿಯಿಂದ ಇದ್ದಾರೆ. ಸದಸ್ಯೆಯರ ಮಧ್ಯೆಯೇ ವಾಟ್ಸ್‌ಆಪ್ ಗ್ರೂಪ್ ಕೂಡ ಆಗಿ ಸ್ವಂತ 'ಅಕ್ಕ–ತಂಗಿಯರ' ತರದ ಬಾಂಧವ್ಯ ಬೆಳೆದಿದೆ.

## ಸಾಧನೆ ದಾಖಲಾಗಬೇಕು...

ಈ ಗುಂಪಿನ ಸದಸ್ಯೆ ಶೋಭಾ ರಾವ್ ಅವರು ಸೆಲ್ಲರ್ಸ್ ಜೊತೆ ಮಾತನಾಡಿ ಅವರ ಸಾಧನೆ ಬರೆದುಕೊಡುವುದು, ಮಾರಾಟಗಾರರ ಜೊತೆ ಸಂಪರ್ಕ ಇಟ್ಟುಕೊಂಡು ಅವರ ಕಡೆ ಗಮನಹರಿಸುತ್ತಾರೆ. ಅಂಜಲಿ ಹೆಗಡೆ ಈ ಗ್ರೂಪ್‌ನ ಅಕೌಂಟ್ ಪರಿಶೀಲನೆ ಮಾಡುತ್ತಾರೆ. ಮಹಿಳಾ ಮಾರಾಟಗಾರರಿಗೆ ಐಡಿ ನಂಬರ್ ಕೊಡುವ ಕೆಲಸ ಕಾವ್ಯ ಮಹೇಶ್, ಶ್ರೀವಿದ್ಯಾ ಕಾಮತ್ ಮಾಡುವ ಮೂಲಕ ಬೆಂಬಲ ಕೊಡುತ್ತಿದ್ದಾರೆ. ರೋಹಿಣಿ ರಾವ್ ಅವರು ಗುಂಪಿನಲ್ಲಿ ಏನಾದರೂ ತಾಂತ್ರಿಕ ಸಮಸ್ಯೆ ಇದ್ದರೆ ಸರಿಪಡಿಸುವ ಕೆಲಸ ಮಾಡುವುದು ಜೊತೆಗೆ ಅತಿಥಿಗಳ ಸಂದರ್ಶನ ಮಾಡುವ ಕೆಲಸದಲ್ಲಿ ನಿರತರಾಗಿದ್ದಾರೆ.

'ಮಹಿಳಾ ಮಾರುಕಟ್ಟೆ'ಯ ಯಶಸ್ಸಿನ ಕಥೆ ಹೇಳಿ ಮುಗಿಸಿದ ಅಪರ್ಣಾ ರಾವ್, ಗುಂಪಿನ ಸದಸ್ಯೆಯರಿಗೆ ಸೂಕ್ತ ಸಲಹೆ, ಸೂಚನೆ ನೀಡುವುದು, ಪೋಸ್ಟರ್ ಹಾಕುವುದು, ಸಂವಾದ, ಉಪನ್ಯಾಸ ಸರಣಿ ಆಯೋಜನೆ, ಮಹಿಳೆಯರಿಗೆ ಉಪಯುಕ್ತವೆನಿಸುವ ವಿಡಿಯೊ ಅಪ್‌ಲೋಡ್ ಮಾಡುವ ಜವಾಬ್ದಾರಿ ಕೂಡ ನಿಭಾಯಿಸುತ್ತಿದ್ದಾರೆ.

## ಏನುಂಟು ಏನಿಲ್ಲ...?

ಮಹಿಳಾ ಮಾರುಕಟ್ಟೆ ಒಂದು ರೀತಿಯಲ್ಲಿ 'ಹೆಣ್ಮಕ್ಕ ಸಂತೆ'. ಇಲ್ಲಿ ಉತ್ತರ ಕರ್ನಾಟಕದ ಜೋಳದ ರೊಟ್ಟಿ, ಸಜ್ಜೆ ರೊಟ್ಟಿ, ಗೋಕಾಕ ಕರದಂಟು, ಧಾರವಾಡ ಪೇಡ, ಶಿರಸಿಯ ಅಪ್ಪೆಮಿಡಿ, ಹುಳಿಪುಡಿ, ಸಾಂಬಾರು ಪುಡಿ, ಕಷಾಯ ಪುಡಿ, ಉಪ್ಪಿನಕಾಯಿ, ತುಪ್ಪ, ಜೇನುತುಪ್ಪ, ಕೊಬ್ಬರಿ ಎಣ್ಣೆ, ಹಪ್ಪಳ, ಸಂಡಿಗೆ, ಚಿಪ್ಸ್, ಡ್ರೈಫ್ರೂಟ್ಸ್, ಸೌಂದರ್ಯ ಸಾಧನಗಳು. ಕೃತಕ ಆಭರಣ, ಬೆಲೆಬಾಳುವ ರೇಷ್ಮೆ ಸೀರೆ, ಸಲ್ವಾರ್, ಕುರ್ತಿ, ಬೆಡ್‌ಶೀಟ್, ಬ್ಯಾಗ್, ಪಿಲ್ಲೊಕವರ್ ಎಲ್ಲವೂ ಸಿಗುತ್ತವೆ. ಎಲ್ಲ ಸಾಮಗ್ರಿಗಳು ಕೊರಿಯರ್, ಪಾರ್ಸಲ್ ಮೂಲಕ ಸರಬರಾಜು ಆದರೆ ಹಣದ ವಹಿವಾಟು ಗೂಗಲ್‌ಪೇ, ಫೋನ್‌ಪೇ, ಅಕೌಂಟ್ ಟ್ರಾನ್ಸ್‌ಫರ್ ಮೂಲಕ ನಡೆಯುತ್ತಿದೆ. ಇಷ್ಟೇ ಏಕೆ ಆನ್‌ಲೈನ್‌ನಲ್ಲೇ ಇಂಗ್ಲಿಷ್, ಹಿಂದಿ ಮಾತನಾಡಲು ಕಲಿಸುವವರು, ಜ್ಯೋತಿಷ್ಯ ಹೇಳುವವರು, ಸಂಗೀತ ಕಲಿಸುವವರು ಕೂಡ ಇದ್ದಾರೆ.

ಅಪರ್ಣಾ ರಾವ್ ಸಂಪರ್ಕ: 9987963429

### ಬದುಕಿಗೆ ದಾರಿ ತೋರಿದೆ..

ಮಹಿಳಾ ಮಾರುಕಟ್ಟೆ ನನ್ನ ಬದುಕಿಗೊಂದು ದಾರಿ ಒದಗಿಸಿಕೊಟ್ಟಿದೆ. ಹುಬ್ಬಳ್ಳಿಯಲ್ಲಿ ಎನ್‌ಜಿಒ ಒಂದರಲ್ಲಿ ಕೆಲಸ ಮಾಡುತ್ತಿದ್ದ ನನಗೆ ಕಳೆದ ವರ್ಷ ಕೊರೊನಾದಿಂದ ಲಾಕ್‌ಡೌನ್ ಆದಾಗ ಕೆಲಸ ಕಳೆದುಕೊಳ್ಳಬೇಕಾಯಿತು. ಈ ಸಂದಭದಲ್ಲಿ ಫೇಸ್‌ಬುಕ್ ನೋಡಿದಾಗ 'ಮಹಿಳಾ ಮಾರುಕಟ್ಟೆ' ಬಗ್ಗೆ ತಿಳಿಯಿತು. ನಾನು ಸ್ವ-ಉದ್ಯೋಗ ಮಾಡಿದರೆ ಇಲ್ಲೇ ಮಾರ್ಕೆಟಿಂಗ್ ಮಾಡಬಹುದು ಎನಿಸಿ ನೈಸರ್ಗಿಕ ಉತ್ಪನ್ನಗಳಿಂದ ಧೂಪ, ಸಾಂಬ್ರಾಣಿಪುಡಿ, ಅಗರಬತ್ತಿ ತಯಾರಿಸಲಾರಂಭಿಸಿದೆ. ಇದಕ್ಕೆ ಬಹಳ ಬೇಡಿಕೆ ಬಂತು. ಒಂದು ವರ್ಷದಲ್ಲಿ ಸುಮಾರು 1500 ಗ್ರಾಹಕರನ್ನು ಪಡೆದೆ. ವಹಿವಾಟು ಚೆನ್ನಾಗಿ ನಡೆಯುತ್ತಿದೆ. .

-ಮಮತಾ ಮುಜುಂದಾರ್, ಹಾವೇರಿ